ರಿಜಿಸ್ಟ್ರೇಷನ್ ಇಲಾಖೆ.

ನಂ. 4. ತಾರೀಖು 21ನೇ ಜುಲೈ 1885.

ಇದರಿಂದ ತಿಳಿಯಪಡಿಸುವದೇನಂದರೆ, ಡಿ|| ಮು|| ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಜೇವಾರಸಾಗಿ ಬಾಕೀಲಿರುವ ಈ ಕೆಳಗೆ ತಪಸೀಲ್ ವಿವರಿಸುವ ದಸ್ತಾವೇಜುಗಳ ಮೂಲೀಕರಾಗಲಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ಹೊಂದಿದ ಮುತಾಲೀಕರಾಗಲಿ, ಈ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸದರೀ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತೆಗದುಕೊಳ್ಳಬಹುದು, ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟ 85ನೇ ಸೆಕ್ಷನ ಮೇರಿಗೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರೆಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
1883—84 13	ತಲ್ಕಾಡಿನಲ್ಲಿರುವ ಗುರು ಸಾಂತಯ್ಯನ ವೀರಪಟ್ಟಿ	ತಲ್ಕಾಡಿ ತಾಲ್ಲೂಕು ಕಸಬಾ ಹೋಬಳಿ ಪೆಟ್ಟಿಹಳ್ಳಿ ಗ್ರಾಮದಲ್ಲಿರುವ ದತ್ತು ಚಿಕ್ಕಮಲ್ಲಪ್ಪನ್ನ	5—4—83	5—4—83	195 ರೂಪಾಯಿನ ಜಮ್ಮಿ ಕ್ರಯ ಪತ್ರ.
1883—84 63	ಮೈಸೂರು ಬಕಷಿನರಸಪ್ಪನವರ ಅಗ್ರಹಾರವಲ್ಲಿರುವ ಆಶ್ವಥಶಾಸ್ತ್ರಿಗಳ ಮಗ ಕೃಷ್ಣಶಾಸ್ತ್ರಿ	ತಿರುಮಕೂಡ್ಲು ನರಸೀಪುರ ತಾಲ್ಲೂಕು ಗರ್ಗೇಶ್ವರಿಯಲ್ಲಿ ಇರುವ ಪಟ್ಟದ ವೀತಾರಾಮ ಶಾಸ್ತ್ರಿ	23—4—83	23—4—83	50 ರೂಪಾಯಿನ ಜಮ್ಮಿ ಕ್ರಯಪತ್ರ.
1883—84 82	ನಂಜನಗೂಡು ತಾಲ್ಲೂಕು ತಗಡೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ರಾಮಸ್ವಾಮಿಯ್ಯನ ಮಗ ಸುಬ್ಬಂಣಿ	ತಿ|| ನರಸೀಪುರ ತಾಲ್ಲೂಕು ಮೂಗೂರು ಹೋಬಳಿಜೊಡಿ ಕಂಸಾಗಾಲ್ ಗ್ರಾಮದಲ್ಲಿರುವ ಸ್ಮಾರ್ತ ಬ್ರಾಹ್ಮಣ ದೊಡ್ಡಕೃಷ್ಣಂಭಟ್ಟರ ಮಗ ವಿಶ್ವೇಶ್ವರಯ್ಯ	27—4—83	27—4—83	200 ರೂಪಾಯಿನ ಜಮ್ಮಿ ಕ್ರಯ ಪತ್ರ.

ತಿ. ಶ್ರೀನಿವಾಸಯ್ಯಂಗಾರ್,
ಫೂರ್ ರಿಜಿಸ್ಟ್ರಾರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 3ನೇ ಜುಲೈ 1885.

ಶಿವಮೊಗ್ಗೆಯಲ್ಲಿ ಯಿರುವ ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕ ಡಿಪಾಜಿಟ್ಟುದಾರ್ರುಗಳಿಗೆ, ಇದರಿಂದ ತಿಳಿಸುವದೇನಂದರೆ.—

ಸ್ಯ 1885ನೇ ಇಸವಿ ಮಾರ್ಚೀ 31ನೇ ಮಕ್ಕುಂ ವರಿಗೆ ಆಗುವ ಬಡ್ಡಿ ಫೈಸಲ್ ಬಗ್ಗೆ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಹಾಜರ್ಮಾಡತಕ್ಕದ್ದು.

ಪಿ. ಪಂಚನಾಥರಾವ್,
ಟ್ರೆಜರೀ ಆಫೀಸರ್.